ಅದು ಜರ್ಮನಿಯ ದೊಡ್ಡ ವಿಮಾನ ನಿಲ್ದಾಣ. ಫ್ರಾಂಕ್‌ಫರ್ಟ್ ಏರ್‌ಪೋರ್ಟ್. ಆತುರಾತುರವಾಗಿ ಟ್ಯಾಕ್ಸಿಯಿಂದ ಇಳಿದ ದೇವರಾಜು ನೇರ ಚೆಕ್ ಇನ್ ಕೌಂಟರಿನತ್ತ ಧಾವಿಸಿದರು. ಫ್ಲೈಟ್ ಮಿಸ್ ಆಗಿಬಿಡುತ್ತದೆ ಎನ್ನುವ ಆತಂಕಕ್ಕೆ ಎದೆಬಡಿತ ಹೆಚ್ಚಾಗಿತ್ತು. ಚಳಿಯಲ್ಲೂ ಹಣೆ ಬೆವರು ಸಾಲುಗಟ್ಟಿತ್ತು.

"ಇನ್ನು ಹದಿನೈದು ನಿಮಿಷ ತಡವಾಗಿದ್ದರೆ ಫ್ಲೈಟ್ ಮಿಸ್ ಆಗುತ್ತಿತ್ತು..." ಎಂದು ಕೌಂಟರಿನಲ್ಲಿದ್ದವ ಹೇಳಿದಾಗ 'ಸದ್ಯ, ತಪ್ಪಿಹೋಗಲಿಲ್ಲವಲ್ಲ' ಎಂದು ಸಮಾಧಾನಪಟ್ಟುಕೊಂಡರು.

"ಬ್ಯಾಗೇಜು ಎರಡು ಕೆ.ಜಿ. ಹೆಚ್ಚಿದೆ."

ಏರ್‌ಲೈನ್ಸ್ ಸಿಬ್ಬಂದಿ ಹೇಳಿದಾಗ ಫ್ಲೈಟ್ ಮಿಸ್ ಮಾಡಿಕ್ಕೊಳ್ಳುವ ಆತಂಕದಿಂದ ಇನ್ನೂ ಸಾವರಿಸಿಕೊಳ್ಳುತ್ತಿದ್ದ ದೇವರಾಜುಗೆ ಚಿಂತೆಯಾಯಿತು.

